ಅಲ್ಲಿಂದ ಬಂದ ತಕ್ಷಣವೆ ಆದ್ಯತೆಯ ಮೇರೆಗೆ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಸಿ.ಎಸ್. ಪುಟ್ಟರಾಜು : ಅಲ್ಲಿರುವಂತಹ ಸಮಸ್ಯೆಯನ್ನು ಸರಿಪಡಿಸುತ್ತೇವೆಂದು ಈ ಸದನದ ಮೂಲಕ ಮಾನ್ಯ ಸಚಿವರು ಹೇಳುತ್ತಿದ್ದಾರೆ. ನಾನು ಆ ಕ್ಷೇತ್ರದ ಶಾಸಕನಾಗಿ ತಮ್ಮಲ್ಲಿ ಒತ್ತಾಯ ಮಾಡುವುದಿಷ್ಟೆ; ಪಾಂಡವಪುರ ಟೌನ್‌ನಲ್ಲಿ 100-bed hospital ಕಟ್ಟಡವು ಸಂಪೂರ್ಣವಾಗುತ್ತಾ ಬರುತ್ತಿದೆ. ಇವತ್ತು ಕಾಂಪೌಂಡ್ ಕಟ್ಟುವುದಕ್ಕೆ ಅನುದಾನವಿಲ್ಲವೆಂದು ಹೇಳಿ ಇವತ್ತು ಆಟೋ ಸ್ಟ್ಯಾಂಡ್, ಸೈಕಲ್ ಸ್ಟ್ಯಾಂಡ್, ಸ್ಕೂಟರ್‌ನ್ನು ನಿಲ್ಲಿಸುವಂತಹ ವ್ಯವಸ್ಥೆಯು ಆ ಆಸ್ಪತ್ರೆಯ ಆವರಣದಲ್ಲಿ ನಡೆಯುತ್ತಿದೆ. ಇಂತಹ ಅನೇಕ ಸಮಸ್ಯೆಗಳು ಇವತ್ತು ನನ್ನ ಕ್ಷೇತ್ರದಲ್ಲಿ ಆರೋಗ್ಯ ಇಲಾಖೆಯ ಆಸ್ಪತ್ರೆಯ ಕಟ್ಟಡಗಳು ಇದೆಯೋ ಎಲ್ಲಾ ಆಸ್ಪತ್ರೆ ಕಟ್ಟಡ ಇರುವಂತಹ ವ್ಯಾಪ್ತಿಯಲ್ಲಿ ಈ ಸಮಸ್ಯೆಯು ಉದ್ಭವವಾಗಿದೆ. ದಯಮಾಡಿ ಸಚಿವರು ಸಂಬಂಧಪಟ್ಟಂತಹ ಮುಖ್ಯಸ್ಥರಿಗೆ ಸೂಚನೆಯನ್ನು ಕೊಟ್ಟು ಅಲ್ಲಿ ಅಗತ್ಯ ಸೌಕರ್ಯಗಳನ್ನು ಕಲ್ಪಿಸಿಕೊಡುವಂತಹ ವ್ಯವಸ್ಥೆಯಾಗ ಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಏನು ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೋ ಅದರ ಬಗ್ಗೆ ನಾನು ಆದಷ್ಟು ಬೇಗನೆ ಆ ಸಮಸ್ಯೆಗೆ ಪರಿಹಾರವನ್ನು ಮಾಡಿಕೊಡುತ್ತೇನೆ.

ಹಜ್ ಭವನ ನಿರ್ಮಾಣ

51 (517) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ನಿರ್ಮಿಸಲು ಉದ್ದೇಶಿಸಲಾದ ಹಜ್ ಭವನ ನಿರ್ಮಾಣ ಪ್ರಕ್ರಿಯೆಯ ವಿವರಗಳೇನು; ಹಜ್ ಭವನಕ್ಕಾಗಿ ಮಂಜೂರಾದ ಜಮೀನಿನ ವಿಸ್ತೀರ್ಣ ಮತ್ತಿತರ ವಿವರಗಳೇನು;

ಆ) ಹಜ್ ಭವನ ನಿರ್ಮಾಣ ಕಾಮಗಾರಿಯನ್ನು ಪೂರ್ಣ ಪ್ರಮಾಣದಲ್ಲಿ ಮುಕ್ತಾಯಗೊಳಿಸಲು ನಿಗದಿಗೊಳಿಸಿದ ಅವಧಿ ಎಷ್ಟು,

ಇ) ರಾಜ್ಯದಲ್ಲಿನ ಹಜ್ ಯಾತ್ರಿಕರುಗಳ ಸಂಖ್ಯಾ ಪ್ರಮಾಣವನ್ನು ಗಮನದಲ್ಲಿರಿಸಿಕೊಂಡು ಹಜ್‌ಭವನ ನಿರ್ಮಾಣದ ವಿಶಾಲತೆಯನ್ನು ನಿಗದಿಗೊಳಿಸಲಾಗಿದೆಯೇ. ಹಾಗಿದ್ದಲ್ಲಿ. ಆ ಕುರಿತಾದ ವಿವರಗಳೇನು?

ಪ್ರೊ. ಡಾ॥ ಮುಮ್ತಾಜ್ ಅಲಿ ಖಾನ್, (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ರಾಜ್ಯ ಸರ್ಕಾರವು ರಾಜ್ಯದ ಹಜ್ ಯಾತ್ರಿಗಳ ಅನುಕೂಲಕ್ಕಾಗಿ ಹಜ್ ಭವನ ನಿರ್ಮಾಣಕ್ಕಾಗಿ ಕರ್ನಾಟಕ ರಾಜ್ಯ ಹಜ್ ಸಮಿತಿಗೆ ಬೆಂಗಳೂರು ಉತ್ತರ, ಹೆಣ್ಣೂರು ಗ್ರಾಮದ ಸರ್ವೆ ನಂ. 30ರಲ್ಲಿ 5.00 ಎಕರೆ ಜಮೀನನ್ನು 2006ರಲ್ಲಿ ಅಂದಿನ ಮಾರ್ಕೆಟ್ ಬೆಲೆಗೆ ಅನ್ವಯವಾಗುವಂತೆ ಮಂಜೂರು ಮಾಡಿರುತ್ತದೆ.

ತದನಂತರ ರಾಜ್ಯ ಸರ್ಕಾರವು ಸದರಿ ಜಾಗವನ್ನು ಖರೀದಿಸುವ ಸಲುವಾಗಿ ಶೇಕಡಾ 50ರಷ್ಟು ರಿಯಾಯಿತಿಯನ್ನು ನೀಡಿದ್ದು, ಈ ಜಾಗವನ್ನು ಖರೀದಿಸಲು ರೂ.2.25 ಕೋಟಿಯ ಅನುದಾನವನ್ನು ಸಹ ಮಂಜೂರು ಮಾಡಿರುತ್ತದೆ.

ರಾಜ್ಯ ಸರ್ಕಾರವು ಶೇಕಡಾ 50ರಷ್ಟು ನೊಂದಾವಣೆ ಹಾಗೂ ಸ್ಟಾಂಪ್ ಶುಲ್ಕದಲ್ಲಿ ರಿಯಾಯಿತಿಯನ್ನು ನೀಡಿದ್ದು, ಸದರಿ ಜಾಗವನ್ನು ದಿನಾಂಕ: 16–3–2009ರಲ್ಲಿ ರಾಜ್ಯ ಹಜ್ ಸಮಿತಿಯು ನೊಂದಾವಣೆ ಮಾಡಿಸಿಕೊಂಡಿರುತ್ತದೆ.

ಈ ಜಾಗವು ಸಾರ್ವಜನಿಕ ಉದ್ಯಾನವನಕ್ಕಾಗಿ ನೋಟಿಫೈ ಆಗಿರುವುದಾಗಿ ಕರ್ನಾಟಕ ಹೈಕೋರ್ಟ್‌ನಲ್ಲಿ ಒಂದು ಪಿಐಎಲ್‌ನ್ನು ಅರ್ಕಾವತಿ ಲೇಔಟ್ ರೆಸಿಡೆಂಟ್ಸ್ ಅಸೋಸಿಯೇಶನ್‌ರವರು ದಾಖಲು ಮಾಡಿದ್ದು, ಡಿಸ್ಪೋಸ್ ಆಗಿದ್ದು, ಇದರ ಮರು ಪರಿಶೀಲನೆಗಾಗಿ ಒಂದು ರಿವ್ಯೂ ಪೇಟಿಷನ್ ಅನ್ನು ಕರ್ನಾಟಕ ಹೈಕೋರ್ಟ್‌ನಲ್ಲಿ ದಾಖಲು ಮಾಡಲಾಗಿದೆ.

ಎರಡನೆಯದಾಗಿ, ಬೆಂಗಳೂರಿನ ಡಬಲ್ ರೋಡ್‌ನಲ್ಲಿರುವ ಬಡಾಮಕಾನ್ ಜಾಗದಲ್ಲಿ ಹಜ್ ಭವನ ನಿರ್ಮಾಣ ಮಾಡುವ ಕುರಿತು ಚಿಂತನೆ ನಡೆಸಲಾಗುತ್ತಿದೆ.

ಆ) ಇಲ್ಲ

ಇ) ಇಲ್ಲ

ಶ್ರೀ ಎನ್.ಎ. ಹ್ಯಾರಿಸ್ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. 2006ನೇ ಇಸವಿಯಲ್ಲಿ 5 ಎಕರೆ ಜಾಗವನ್ನು ಮಂಜೂರು ಮಾಡಿದ್ದಾರೆ. ಇನ್ನು 4–5 ದಿವಸಗಳಲ್ಲಿ 2010ನೇ ಇಸವಿಯು ಪ್ರಾರಂಭವಾಗುತ್ತಿದೆ ಇಲ್ಲಿಯವರೆಗೂ ಒಂದು ಹಜ್ ಭವನವನ್ನು ನಿರ್ಮಾಣ ಮಾಡುವುದಕ್ಕೆ ಸರ್ಕಾರದಿಂದ ಆಗಲಿಲ್ಲವೆನ್ನುವಂತಹ ಸತ್ಯವನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಬಹುಶಃ 5 ಎಕರೆ ಜಾಗವು ಕೂಡ ಅಲ್ಪಸಂಖ್ಯಾತರ ವಿಭಾಗಕ್ಕೆ, ಹಜ್ ಹೋಗುವವರಿಗೆ ಕೊಡಲಿಕ್ಕೆ ಆಗದೇ ಇರುವಂತಹ ಸರ್ಕಾರ ನಮ್ಮದು ಆಗಿದೆಯಾ ಎಂದು ನಾವು ಆಲೋಚನೆಯನ್ನು ಮಾಡಬೇಕಾಗುತ್ತದೆ. ಆದ್ದರಿಂದ ಈ ಕಾರ್ಯಕ್ರಮವನ್ನು ತಾವು ದಯವಿಟ್ಟು ಮಾಡಬೇಕೆಂಬ ಉದ್ದೇಶದಿಂದ ತಾವು ಅದನ್ನು ಮಾಡಿ. ಬೆಂಗಳೂರಿನಲ್ಲಿ 5 ಎಕರೆ ಜಾಗ ಸರ್ಕಾರದಿಂದ ಕೊಡುವುದಕ್ಕಾಗುವುದಿಲ್ಲವೆಂದರೆ ಇದನ್ನು ನಂಬುವುದಕ್ಕೆ ತುಂಬಾ ಕಷ್ಟವಾಗುತ್ತದೆ. ನಿಮ್ಮ ಉದ್ದೇಶವು ಮಾಡಬಾರದು ಅಂತನಾ, ಮಾಡಬೇಕು ಅಂತನಾ ಎಂದು ತಾವು ದಯವಿಟ್ಟು ಹೇಳಬೇಕು. ಹಾಗೆಯೇ ಪ್ರಶ್ನೆಯಲ್ಲಿ ಇದನ್ನು ಯಾವಾಗ ಮುಗಿಸುತ್ತೀರಾ ಎಂದು ಕೇಳಿದರೆ ಅದರ ಬಗ್ಗೆ ಉತ್ತರವೇ ಇಲ್ಲ. At least ನಾನು ನಿಮ್ಮ Governmentಗೆ request ಮಾಡುತ್ತಿದ್ದೇನೆ. ಯಾವುದಾದರೂ ಒಂದು dateಗೆ ಮುಗಿಸುತ್ತೇನೆಂದಾದರೂ ಹೇಳಿ. ನಿಮ್ಮ ಮನಸ್ಸಿನಲ್ಲಿರುವಂತಹದ್ದನ್ನು ಇದೇ ಎಂದು ನಂಬಿಕೊಳ್ಳಲೇ, ಇಲ್ಲ ಎಂದು ಅಂದುಕೊಳ್ಳಲೇ ಎನ್ನುವುದನ್ನು ತಾವು ದಯಮಾಡಿ ತಿಳಿಸಬೇಕು.

ಪ್ರೊ. ಡಾ: ಮುಮ್ತಾಜ್ ಅಲಿ ಖಾನ್ : ಮಾನ್ಯ ಅಧ್ಯಕ್ಷರೆ, ಸರ್ಕಾರದ ಬಗ್ಗೆ ನಿಮಗೆ ಇರುವ ನಿಷ್ಠೆ ಹಾಗೂ ಶಂಕೆಯನ್ನು ಮಾನ್ಯ ಶಾಸಕರು ವ್ಯಕ್ತಪಡಿಸಿದ್ದಾರೆ. ನಾನು ಖಂಡಿತವಾಗಿ ಹೇಳುತ್ತೇನೆ. ಶ್ರದ್ಧೆಯಿಂದ, ನಿಷ್ಠೆಯಿಂದ, ಪ್ರಾಮಾಣಿಕವಾಗಿ ಸರ್ಕಾರವು ಪ್ರಯತ್ನವನ್ನು ಮಾಡುತ್ತದೆ. 5 ಎಕರೆ ಜಮೀನನ್ನು ಹೆಣ್ಣೂರು ರಸ್ತೆಯಲ್ಲಿ ತೆಗೆದುಕೊಂಡಿದ್ದು ಅದು ಖರೀದಿಯಾಗಿದೆ. ಅದಕ್ಕೆ ಶೇಕಡ 50 ರಷ್ಟು ರಿಯಾಯಿತಿ ದರವನ್ನು ಕೊಟ್ಟರು. ಆ ಬಗ್ಗೆ ನೋಂದಾವಣೆ ಮಾಡುವುದು ಕೂಡ ನಮ್ಮ ಸರ್ಕಾರ ಉದಾರ ಸ್ವಭಾವದಿಂದ ಶೇಕಡ 50 ರಷ್ಟು Stamp dutyಯನ್ನು ಮನ್ನಾ ಮಾಡಿ ಕಡಿಮೆ ಮಾಡಿದ್ದಾರೆ.

ಈ ಮಧ್ಯ ಏನಾಯಿತು ಎಂದರೆ ನಾವು ಬಂದು ಒಂದೂವರೆ ವರ್ಷಗಳಷ್ಟೇ ಆಗಿದೆ, 2004 ನಮ್ಮ ಜವಾಬ್ದಾರಿ ಇಲ್ಲ. ಹೆಣ್ಣೂರು ರಸ್ತೆಯಲ್ಲಿ 5 ಎಕರೆ ಜಮೀನಿನಲ್ಲಿ ಹಜ್ ಭವನ ನಿರ್ಮಾಣ ಮಾಡಬೇಕೆಂದು ನಿರ್ಧರಿಸಿದಾಗ ಅಲ್ಲಿನ ಅರ್ಕಾವತಿ ಲೇಔಟ್‌ನ ಪ್ರತಿನಿಧಿಗಳು ಅಡ್ಡಿ ಬಂದು ಅವರು ಕೋರ್ಟಿಗೆ ಹೋದರು ಇದು ಪಬ್ಲಿಕ್ ಪಾರ್ಕ್ ಇರುವುದರಿಂದ ಇದನ್ನು ಹಜ್ ಭವನ ನಿರ್ಮಾಣ ಮಾಡಲಿಕ್ಕಾಗುವುದಿಲ್ಲವೆಂದು ವಾದ ಮಾಡಿದರು. ಶ್ರೇಷ್ಠ ನ್ಯಾಯಾಧೀಶರು ನಮಗೆ ನಿರ್ದೇಶನ ಕೊಟ್ಟರು, ಬಿ.ಡಿ.ಎ. ಅಧಿಕಾರಿಗಳ ಬಳಿ ಹೋಗಿ ಬೇರೆಲ್ಲಿಯಾದರೂ ಜಮೀನು ಸಿಗುತ್ತದೆಯೇ ಎಂದು ನೋಡಿ ಎಂದರು. ಆಗ ನಾವು ಐದು ಕಡೆ ಹೋಗಿ ಬಹಳ ಕಷ್ಟಪಟ್ಟು ಜಮೀನು ನೋಡಿದ್ದೇವೆ. ನಿರ್ಜನ ಪ್ರದೇಶ, ದಟ್ಟ ಕಾಡಿನ ಪ್ರದೇಶ ಇಲ್ಲಿಂದ 30–35 ಮೈಲಿ ದೂರವಿರುವ ಪ್ರದೇಶದಲ್ಲಿ ಹಜ್ ಭವನ ಕಟ್ಟಿದರೆ ತುಂಬಾ ತೊಂದರೆಯಾಗುತ್ತದೆ, ಆಗುವುದಿಲ್ಲವೆಂದು ನಾವು ಹೈಕೋರ್ಟ್‌ನಲ್ಲಿ ಹೇಳಿದ್ದೇವೆ. ಆದರೂ ಸಹ ಅಲ್ಲಿ ಪಬ್ಲಿಕ್ ಪಾರ್ಕ್ ಇದೆ ಎಂದರು. ಹಾಗಾಗಿ ಅಲ್ಲೇ ಉಳಿದಿದೆ. ಈ ಮಧ್ಯೆ ಕೇವಲ ಇಬ್ಬರು ಮೂವರು ಸೇರಿ ನಿರ್ಧಾರ ಮಾಡುವುದು ಉಚಿತವಲ್ಲವೆಂದು ಬೆಂಗಳೂರಿನ ಗಣ್ಯ ವ್ಯಕ್ತಿಗಳು, ಧಾರ್ಮಿಕ ನಾಯಕರನ್ನು 50 ಜನರನ್ನು ಕರೆಸಿ, ಸಭೆ ನಡೆಸಿ ಅವರ ಅಭಿಪ್ರಾಯ ಪಡೆದು ಅವರ ಅಭಿಪ್ರಾಯದ ಪ್ರಕಾರ ಒಂದು ಮಿಲ್ಲರ್ ರಸ್ತೆಯಲ್ಲಿ **ಮುಕ್ತಾರ್ ಶಾದಿಮಹಲ್ ಒಂದಿದೆ,** ಎರಡನೆಯದು ಕೆಂಗಲ್ ಹನುಮಂತಯ್ಯ ರಸ್ತೆ, ಡಬಲ್ ರೋಡ್‌ನಲ್ಲಿರುವ ವಕ್ಫ್ ಬೋರ್ಡ್‌ನ ಜಮೀನಿದೆ, ಮೂರನೆಯದಾಗಿ ಯಕೀನ್ ಷವಾಬ್ **ದರ್ಗಾ** ಜಮೀನು ಯಲಹಂಕಾದ ಬಳಿ ಇದೆ. **ಮುಕ್ತಾರ್ ಶಾದಿಮಹಲ್**ಗೆ ಹೋದಾಗ ನಮ್ಮ ರೋಶನ್ ಬೇಗ್‌ರವರು ಸಹ ಬಂದಿದ್ದರು. ಅವರೂ ಸಹ ಮನಸ್ಸು ಮಾಡಿದರು ತೆಗೆದುಕೊಳ್ಳಬೇಕೆಂದು. ಅವರು ಕೊಡಲಿಕ್ಕೆ ಸಿದ್ಧರಿರಲಿಲ್ಲ. ಅದು 13–14 ಸಾವಿರ ಚದರ ಅಡಿ ಮಾತ್ರ ಇರುವುದು. ಎರಡನೆಯದಾಗಿ ಡಬಲ್ ರೋಡ್‌ನಲ್ಲಿರುವುದು ಬಡಾ ಮಕಾನ್ ನಮ್ಮದೇ ಜಮೀನು ಆಗಿರುವುದರಿಂದ ಆ ಕಡೆ ನಾವು ಗಮನ ಕೊಟ್ಟಿದ್ದೇವೆ. ಅಲ್ಲಿ ಕಾನೂನು ದೃಷ್ಟಿಯಲ್ಲಿ ಕೆಲವು ಅಡಚಣೆಗಳು ಬಂದಿದ್ದವು. ಅದನ್ನು ನಿವಾರಿಸಿ ಇಷ್ಟರಲ್ಲಿಯೇ ನಾವು ಖಾತಾ ಇತ್ಯಾದಿಯನ್ನು ಮಾಡಲಿಕ್ಕೆ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ಈಗ ಮಾಡುತ್ತೇವೆ. ಹಜ್ ಯಾತ್ರಿಕರ ಸೇವೆ ಮಾಡಲಿಕ್ಕೆ ಮುಖ್ಯಮಂತ್ರಿಗಳು ನಮಗೆ ಆದೇಶ ಕೊಟ್ಟಿದ್ದಾರೆ. ಯಾವ ಕಾರಣಕ್ಕೂ ಹಜ್ ಯಾತ್ರಿಕರಿಗೆ ತೊಂದರೆಯಾಗಕೂಡದು ಎಂದು ನನಗೆ

ಮುಖ್ಯಮಂತ್ರಿಗಳಿಂದ ಆದೇಶವಾಗಿದೆ. ನಿಮಗೆ ನಾನು ಸಹ ಆಶ್ವಾಸನೆಯನ್ನು ಕೊಡುತ್ತೇನೆ. ನಿಮಗಿರುವಷ್ಟೇ ಕಾಳಜಿ ನಮಗೂ ಇದೆ. ಈ ಜಮೀನು ಇತ್ಯರ್ಥವಾದ ಒಂದು ವರ್ಷದೊಳಗೆ ಹಜ್ ಭವನ ಕಟ್ಟಲಿಕ್ಕೆ ನಾವು ಪ್ರಯತ್ನಪಡುತ್ತೇವೆ. ಈಗಾಗಲೇ ಅನೇಕ ಬಿಲ್ಡರ್ಸ್ ಜೊತೆ ಮಾತುಕತೆ ನಡೆಸಿದ್ದೇವೆ. ನಾವು ಸುಮ್ಮನೆ ಕುಳಿತಿಲ್ಲ. ಇದು ನಮ್ಮ ಧಾರ್ಮಿಕ ಕರ್ತವ್ಯ, ಸರ್ಕಾರ ಹಾಗೂ ನೀವೆಲ್ಲಾ ನಮ್ಮ ಜೊತೆಯಲ್ಲಿದ್ದೀರಿ. ಮಾಡೋಣ.

ಶ್ರೀ ಎನ್.ಎ. ಹ್ಯಾರಿಸ್ : ಈ ಸಂಗತಿಯನ್ನು ಬಹಳ ಆಲೋಚನೆ ಮಾಡಬೇಕಾಗಿದೆ. ನಮ್ಮ ಕಾನೂನು ಸಚಿವರ ಗಮನ ಸೆಳೆಯಲಿಕ್ಕೆ ಇಚ್ಛಿಸುತ್ತೇನೆ. ಮುಖ್ಯಮಂತ್ರಿಯವರು ಈ ಹಜ್ ಭವನ ಮಾಡಬೇಕು, ಹಜ್ ಯಾತ್ರಿಕರಿಗೆ ತೊಂದರೆಯಾಗಬಾರದೆಂದು ನೇರವಾಗಿ ಹೇಳಿದ್ದಾರೆ. ಬಹಳ ಸಂತೋಷ. 2006ನೇ ಇಸವಿಯಿಂದ ಇಲ್ಲಿಯವರೆಗೂ ಬೆಂಗಳೂರಿನಲ್ಲಿ ಒಂದು ಅಡಿ ಜಾಗ ಕೂಡ ಯಾರಿಗೂ ಕೊಟ್ಟಿಲ್ಲವೇ? ಬೇರೆಯವರಿಗೆ ಕೊಡಲಿಕ್ಕೆ ಜಾಗ ಇರಲಿಲ್ಲವೇ? ಹಜ್‌ಗೆ ಮಾತ್ರ 5 ಎಕರೆ ಜಾಗ ಕೊಡಲಿಕ್ಕೆ ಸಾಧ್ಯವಾಗದೇ ಇರುವಂಥ ಸರ್ಕಾರ ಎಂದರೆ ನಿಜವಾಗಿಯೂ ನಾವು ಆಲೋಚಿಸಬೇಕಾಗುತ್ತದೆ. ಅದಾದ ಮೇಲೆ ಎಷ್ಟು ಸರ್ಕಾರಿ ಜಾಗವನ್ನು ನೀವು ಎಲ್ಲೆಲ್ಲಿ ಕೊಟ್ಟಿದ್ದೀರಿ? ಇದಕ್ಕೆ ಮಾತ್ರ ಏಕೆ ಕೊಡುತ್ತಿಲ್ಲ? ಇನ್ನು ಒಂದು ವರ್ಷದಲ್ಲಿ ಮಾಡುತ್ತೇವೆಂದು ಸಚಿವರು ಹೇಳುತ್ತಿದ್ದಾರೆ, ನಿಮ್ಮ ಸರ್ಕಾರ ಬಂದು ಈಗಾಗಲೇ ಒಂದು ವರ್ಷ ಒಂಭತ್ತು ತಿಂಗಳು ಆಗುತ್ತಿವೆ. ಇನ್ನೂ ಒಂದು ವರ್ಷದಲ್ಲಿ, ಐದು ತಿಂಗಳಲ್ಲಿ ಮಾಡುತ್ತೇವೆಂದರೆ ಖಂಡಿತವಾಗಿಯೂ ನಂಬಲಿಕ್ಕೆ ಕಷ್ಟವಿದೆ, ಒಂದು ಹಜ್ ಭವನ ಮಾಡಲಿಕ್ಕೆ ಜಾಸ್ತಿ ಜಾಗ ಬೇಕಾಗಿಲ್ಲ, ಕೇವಲ 5 ಎಕರೆ ಬೇಕಾಗಿರುವುದು Airportಗೆ ಹತ್ತಿರವಿರುವ ಜಾಗದಲ್ಲಿ ನೀವು identify ಮಾಡಿ. ಖಂಡಿತವಾಗಿಯೂ ನೀವು ಮನಸ್ಸಿದ್ದರೆ ತಕ್ಷಣ ಅದನ್ನು ಮಾಡಬಹುದು, ಮುಖ್ಯಮಂತ್ರಿಗಳಿಗೆ ಮನಸ್ಸಿದೆ ಎಂದು ಹೇಳಿದಿರಿ. ಆದರೆ ನಿಮಗೆ ಮನಸ್ಸಿಲ್ಲವೇ ಎಂಬುದನ್ನು ನಾವು ಇಲ್ಲಿ ಸಂಶಯವಾಗಿ ನೋಡಬೇಕಾದ ಸಂದರ್ಭ ಇದೆ. ಆದ್ದರಿಂದ ದಯವಿಟ್ಟು ಅವರ ಮನಸ್ಸು, ನಿಮ್ಮ ಮನಸ್ಸು ಎಲ್ಲಾ ಕೂಡಿ ಸೇರಿಸಿ ತಕ್ಷಣ ನೀವು ತೀರ್ಮಾನ ಮಾಡಿದರೆ ತಕ್ಷಣ ಮಾಡಬಹುದು. ಇದಕ್ಕೆ ಕೇವಲ ಐದು ಎಕರೆಯಷ್ಟು ಜಾಗ ಮಾತ್ರ ಬೇಕಾಗಿದೆ. ಜಾಸ್ತಿ ಬೇಕಾಗಿಲ್ಲ. ಹಾಗಾಗಿ ದಯವಿಟ್ಟು ಇದನ್ನು ತಕ್ಷಣ ಮಾಡಲಿಕ್ಕೆ ಕಾರ್ಯಕ್ರಮವನ್ನು ರೂಪಿಸಬೇಕು.

ಶ್ರೀ ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ಹ್ಯಾರಿಸ್‌ರವರು ಹೇಳಿದ ಹಾಗೆ ಭೂ ಒತ್ತುವರಿಯಾಗಿರುವ ನೂರಾರು ಜಮೀನುಗಳನ್ನು ಸರ್ಕಾರ ಬೇಕಾದಷ್ಟು ವಾಪಸ್ಸು ತೆಗೆದುಕೊಂಡಿದೆ. ಆ ಜಮೀನುಗಳನ್ನು ಸರ್ಕಾರದ ಅಂಗಸಂಸ್ಥೆಗಳಿಗೆ ಕೊಡುವಂಥದ್ದನ್ನು ಮಾಡಿದೆ. ಅನೇಕ ಜಮೀನುಗಳನ್ನು ಮಾರುಕಟ್ಟೆಯಲ್ಲಿ auction ಕೂಡ ಮಾಡಿದರು. ಅದರಿಂದ ತಮ್ಮ ಉತ್ತರದಲ್ಲಿ ನಮಗೆ ಐದು ಎಕರೆ ಎಲ್ಲಿಯೂ ಸಿಗುತ್ತಿಲ್ಲ, ಕಾಡು ಪ್ರದೇಶ, ಮತ್ತೊಂದು ಎಂದು ಹೇಳುವುದು ಅಷ್ಟು ಸಮಂಜಸವಲ್ಲ, ಅನೇಕ ಸರ್ಕಾರಿ ಜಮೀನುಗಳು ಒತ್ತುವರಿಯಾಗಿರುವುದನ್ನು ವಾಪಸ್ಸು ತೆಗೆದುಕೊಂಡಿದ್ದೀರಿ, ತಾವು ಮನಸ್ಸು ಮಾಡಿದರೆ ಹಜ್ ಭವನ ನಿರ್ಮಾಣ ಮಾಡಲಿಕ್ಕೆ ಪೂರ್ತಿ ಅವಕಾಶ ಇದೆ. ಹಾಗಾಗಿ ಇದನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಜಮೀನುಗಳಿವೆ. ಇಲ್ಲವೆಂದು ಹೇಳಲಿಕ್ಕೆ ಹೋಗಬೇಡಿ.

ಶ್ರೀ ಯು.ಟಿ. ಖಾದರ್ : ಹಜ್‌ಗೆ ಇಡೀ ರಾಜ್ಯದಿಂದ ಅಲ್ಪಸಂಖ್ಯಾತರು ಇವತ್ತು ಬರುತ್ತಿದ್ದಾರೆ. ಪ್ರಾಮಾಣಿಕತೆ ಬಗ್ಗೆ ನಮಗೆ ವಿಶ್ವಾಸ ಇದೆ. ಆದರೆ ಪ್ರಾಮಾಣಿಕತೆಯ ಜೊತೆಯಲ್ಲಿ ಒಂದು ದೂರದೃಷ್ಟಿ ಬೇಕು ಮತ್ತು ಇಚ್ಛಾಶಕ್ತಿಯೂ ಬೇಕು. ಈ ಒಂದು ಉತ್ತರ ನೋಡುವಾಗ ಡಬಲ್ ರಸ್ತೆಯಲ್ಲಿರುವ ಬಡಾ ಮಕಾನ್ ಹೆಸರನ್ನು ತಾವು mention ಮಾಡಿದಿರಿ. ಇದು ಒಂದು ಸೂಕ್ತವಾದ ಸ್ಥಳವೆಂದು ನಾನು ಹೇಳಬಯಸುತ್ತೇನೆ. ಏರ್‌ಪೋರ್ಟ್‌ಗೆ ಹತ್ತಿರವಿದ್ದರೆ ಅದು ಬಹಳಷ್ಟು busiest area. ಅಲ್ಲಿ ಮತ್ತಷ್ಟು ಸಮಸ್ಯೆಯಾಗುತ್ತದೆ. ಹಾಗಾಗಿ ಭವಿಷ್ಯದಲ್ಲಿ ದೂರದೃಷ್ಟಿಯ ಆಲೋಚನೆ ಇಟ್ಟುಕೊಂಡು ದೇವನಹಳ್ಳಿಯ ನಮ್ಮ ಏರ್‌ಪೋರ್ಟ್ ಪಕ್ಕದಲ್ಲಿ ಎಲ್ಲಿಯಾದರೂ ಮಾಡಬೇಕು ಏಕೆಂದರೆ ಜಮೀನು ಖರೀದಿಸಲಿಕ್ಕೆ ಹಣ ಕೊಡುತ್ತೀರಿ. ಹಾಗಾಗಿ ಒಂದು ದೂರದೃಷ್ಟಿಯಿಟ್ಟುಕೊಂಡು ಆ ಸ್ಥಳವನ್ನು ಐಡಿಂಟಿಫೈ ಮಾಡಿ ತೆಗೆದುಕೊಂಡು ಅದರ ಜೊತೆಯಲ್ಲಿ ಇನ್ನೆರಡು ಸ್ಥಳಗಳ ನಕ್ಷೆಯನ್ನು ತಯಾರು ಮಾಡಿ ಮುಂದಿನ ದಿನಗಳಲ್ಲಿ ಆದಷ್ಟು ಬೇಗ ತಯಾರು ಮಾಡಿ ಇದು ಕಾರ್ಯರೂಪಕ್ಕೆ ಬರಲಿ, ಇದಕ್ಕೆ ನಮ್ಮ ಸಹಕಾರ ಸಂಪೂರ್ಣವಾಗಿ ನಿಮಗಿದೆ. ಮಂಗಳೂರಿನಲ್ಲಿಯೂ ಪ್ರಥಮವಾಗಿ ಪ್ರಾರಂಭವಾಗಿದೆ. ಅದಕ್ಕೂ ಕೂಡ ಕೇಂದ್ರ ಹಾಗೂ ರಾಜ್ಯ ಸರ್ಕಾರವನ್ನು

ಅಭಿನಂದಿಸಿ, ಅಲ್ಲಿ ಕೂಡ ಆದಷ್ಟು ಬೇಗ ಚಾಲನೆ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ತನ್ವೀರ್ ಸೇಠ್ : ಮಾನ್ಯ ಸದಸ್ಯರಾದ ಶ್ರೀ ಹ್ಯಾರಿಸ್‌ರವರು ಕೇಳಿರುವ ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಗಳಿಗೆ ನಾನು ಹೇಳುವುದಿಷ್ಟೆ. ರಾಜ್ಯ ಸರ್ಕಾರ ಹೆಣ್ಣೂರು ರಸ್ತೆಯಲ್ಲಿ ಕೊಟ್ಟಂಥ ಐದು ಎಕರೆ ಜಮೀನು ಅಲ್ಲಿ ಸ್ಥಳೀಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಕಿದ ಪಿಐಎಲ್‌ನಿಂದ ಜಮೀನು ವಾಪಸ್ಸು ಪಡೆದುಕೊಂಡಿರುವಂಥ ಪ್ರಕರಣ ಏನಾಗಿದೆ, ಅದು ಬಹುಶಃ ಸರ್ಕಾರದ ರೆವಿನ್ಯೂ ಇಲಾಖೆ ಆ ಜಮೀನು ಕೊಟ್ಟಂಥ ಸಂದರ್ಭದಲ್ಲಿ ಆ ಕರ್ನಾಟಕ ಹಜ್ ಕಮಿಟಿ ಹೆಸರಿಗೆ ಖಾತೆ ನೋಂದಣಿಯಾಗಿ ಎಲ್ಲವು ಆದ ನಂತರ ಕೋಟಿಗೆ ಹೋದಂಥ ಈ ಪ್ರಕರಣ ಬಹುಶಃ ಆ ಜಾಗವನ್ನು ಯಾರಿಂದ ವಾಪಸ್ಸು ಪಡೆಯಬೇಕೆಂಬುದು ಗೊಂದಲವಾಗಿದೆ. ಹಜ್ ಕಮಿಟಿಯ ಸ್ವಾಧೀನಕ್ಕೆ ಬಂದ ನಂತರ ಮತ್ತೆ ಸರ್ಕಾರದ ಮೇಲೆ ಪಿಐಎಲ್ ಹಾಕಿದರೆ ಅದು ಎಷ್ಟು ಸಮಂಜಸ ಎಂದು ಈ ಸಂದರ್ಭದಲ್ಲಿ ನಾವು ಕೇಳಬೇಕಾಗುತ್ತದೆ. ಎರಡನೆಯದು ನಮ್ಮ Infrastructure Department ಗೆ ನಮ್ಮ BIAL Airport ಸಮೀಪದಲ್ಲಿ ಹತ್ತು ಎಕರೆಯನ್ನು ಇದಕ್ಕಾಗಿಯೇ ಕಾದಿರಿಸಬೇಕೆಂಬ ಒಂದು ಪ್ರಸ್ತಾವನೆ ನಾನು ಮಂತ್ರಿಯಾದಂಥ ಸಂದರ್ಭದಲ್ಲಿ ಕಳುಹಿಸಿದ್ದೆವು ಬಹುಶಃ ಮಂತ್ರಿಗಳು ಸರ್ಕಾರದಲ್ಲಿ ಅದು ಯಾವ ಹಂತದಲ್ಲಿದೆಯೆಂದು ಪರಿಶೀಲಿಸ ಬೇಕು. ಏಕೆಂದರೆ ಹಜ್ ಯಾತ್ರಿಕರು ಬರುವಂಥ ಹಾಗೂ ಹೋಗುವಂಥ ಸಂದರ್ಭದಲ್ಲಿ ಈಗ ಹೊಸದಾಗಿ ಆಗಿರುವ ಏರ್‌ಪೋರ್ಟ್‌ನಲ್ಲಿ ಸಾಕಷ್ಟು ತೊಂದರೆಯಾಗುತ್ತಿರುವುದು ಸಚಿವರಿಗೆ ಗೊತ್ತಿದೆ. ಹಾಗಾಗಿ International Airport ಸಮೀಪದಲ್ಲಿ ಒಂದು ಹತ್ತು ಎಕರೆ ಜಮೀನನ್ನು ಇದಕ್ಕಾಗಿ ಕಾದಿರಿಸಿದರೆ ಬಹುಶಃ ಮುಂದಿನ ದಿನಗಳಲ್ಲಿ ಇದು ಉತ್ತಮವಾದ ಬೆಳವಣಿಗೆಯಾಗುತ್ತದೆಂದು ಇದಕ್ಕೆ ನಮ್ಮ ಸಂಪೂರ್ಣ ಸಹಕಾರ ಇದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಪ್ರೊ: ಡಾ: ಮುಮ್ತಾಜ್ ಅಲಿ ಖಾನ್ : ಮಾನ್ಯ ಶಾಸಕರು ಮುಕ್ತ ಮನಸ್ಸಿನಿಂದ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ನಾವು ನಿಮ್ಮ ಸಲಹೆಗಳನ್ನು ಗಮನದಲ್ಲಿಟ್ಟಿದ್ದೇವೆ. ಮತ್ತೊಮ್ಮೆ ನಿಮಗೆ ಹೇಳುತ್ತೇನೆ, ನಾವು ಶ್ರದ್ಧೆ, ನಿಷ್ಠೆಯಿಂದ ಆದಷ್ಟು ಜಾಗ್ರತೆ ನಿವೇಶವನ್ನು ಗುರುತು ಮಾಡಿ ಮುಂದಿನ

ಹೆಜ್ಜೆಯನ್ನು ಇಡುತ್ತೇವೆ. ನಿಮ್ಮ ಕಾಲದಲ್ಲಿ ಪ್ರಾರಂಭವಾಯಿತು. ಹೆಣ್ಣೂರು ಬಂಡೆಯ ಬಳಿ ನೀವೇ ಪ್ರಾರಂಭ ಮಾಡಿದಿರಿ. ಆದರೆ ಅನಿರೀಕ್ಷಿತವಾಗಿ ಅರ್ಕಾವತಿ ಲೇಔಟ್ ಸಂಘದವರು ಅಡ್ಡಿ ಬಂದಿದ್ದಾರೆ. ಶ್ರೇಷ್ಠ ನ್ಯಾಯಾಧೀಶರು ನಮ್ಮ ಪರ ಇರಲಿಲ್ಲ. ಅಲ್ಲಿ ನಾವು ಸೋಲಬೇಕಾಗಿ ಬಂತು. ಆದರೂ ಬಿಟ್ಟಿಲ್ಲ, ಅದಕ್ಕೆ ನಾವು ಅಪೀಲ್ ಮಾಡಿದ್ದೇವೆ. ನಿಮಗೆ ಇಷ್ಟು ಮಾತ್ರ ಆಶ್ವಾಸನೆಯನ್ನು ಕೊಡುತ್ತೇನೆ. ಆದಷ್ಟು ಜಾಗ್ರತೆಯಾಗಿ ನಾವು ನಿವೇಶನ ಮಾಡಿ ಹೆಜ್ಜೆಯನ್ನಿಟ್ಟು ಬಹುಶಃ ಒಂದೂವರೆ ವರ್ಷದೊಳಗೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ರಾಜಕೀಯಕ್ಕೆ ನಾನು ಹೋಗುತ್ತಿಲ್ಲ, ಎಷ್ಟು ಕೆಲಸ ಮಾಡಬೇಕೆಂದಿದೆ ಅಷ್ಟನ್ನು ಮಾತ್ರ ಹೇಳುತ್ತೇನೆ. ನಿಮಗೆ ಆಶ್ವಾಸನೆಯನ್ನು ಕೊಡುತ್ತೇನೆ. ಒಂದು ಸಭೆಯನ್ನು ಕರೆದು ಶಾಸಕರು ನಾವೆಲ್ಲಾ ಮಾತನಾಡೋಣ. ಆದಷ್ಟುಮಟ್ಟಿಗೆ ಈ ಕಾರ್ಯವನ್ನು ನೆರವೇರಿಸುತ್ತೇವೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ಅಧ್ಯಕ್ಷರು : ಎಲ್ಲದಕ್ಕೂ ಈಗ ಬಹಳ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಎನ್.ಎ. ಹ್ಯಾರಿಸ್ : ಎಲ್ಲದಕ್ಕೂ ಒಪ್ಪಿಕೊಂಡಿದ್ದಾರೆ, ಅದನ್ನೇ ನಾನು ಹೇಳಲಿಕ್ಕೆ ಬರುತ್ತಿದ್ದೇನೆ, ಇಲ್ಲಿ ನಾವು ಮಾತನಾಡದೆ ಇನ್ನೆಲ್ಲಿ ಮಾತನಾಡಲಿಕ್ಕೆ ಸಾಧ್ಯವಾಗುತ್ತದೆ ಅಧ್ಯಕ್ಷರೇ, ಇದಕ್ಕೆ ಒಂದು commitment ಇರಲಿ, ಒಂದು ವರ್ಷವೇ, ಒಂದೂವರೆ ವರ್ಷವೇ ಎಂದು ಹೇಳುತ್ತಿದ್ದೇನೆ. ಹೀಗೆ ಮುಂದುವರೆದರೆ ಇಲ್ಲಿರುವ ಅಲ್ಪಸಂಖ್ಯಾತರು ಇನ್ನಾರನ್ನು ಕೇಳಬೇಕು? ದಯವಿಟ್ಟು ಅಧ್ಯಕ್ಷರು ಇದಕ್ಕೆ at least ಒಂದು ವರ್ಷದಲ್ಲಿ ಮಾಡುತ್ತೇವೆಂದು ಒಂದು ಕಮಿಟ್‌ಮೆಂಟ್ ಕೊಡಿ.

ಪ್ರೊ: ಡಾ: ಮುಮ್ತಾಜ್ ಅಲಿ ಖಾನ್ : ಈಗಾಗಲೇ ಹೇಳಿದ್ದೇನೆ. ಅದರಂತೆ ಆದಷ್ಟು ಮಟ್ಟಿಗೆ ಒಂದು ವರ್ಷದೊಳಗೆ ಮಾಡಲಿಕ್ಕೆ ಪ್ರಯತ್ನ ಪಡುತ್ತೇವೆಂದು ಹೇಳುತ್ತಿದ್ದೇನೆ.

ಹಿಂದುಳಿದ ವರ್ಗದ ಫಲಾನುಭವಿಗಳಿಗೆ ಕೊಳವೆ ಬಾವಿ/ಏತ ನೀರಾವರಿ ಸೌಲಭ್ಯ

52 (177) ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಚಿಕ್ಕೋಡಿ ಸದಲಗ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?